ಹೋಗಬಾರದಿತ್ತೇ, ಒಂದು ಕಾಗದವನ್ನಾದರೂ ಬರೆದಿಟ್ಟು ಹೋಗಬಾರದಿತ್ತೇ ಅಂತೆಲ್ಲ ಅನಿಸಿದರೂ ಇದು ಯಾವುದನ್ನೂ ಅವಳು ಯಾಕೆ ಮಾಡಲಿಲ್ಲ ಅಂದರೆ ಸುಳಿವು ಗೊತ್ತಾಗಬಾರದು ಅಂತ. ಯಾರನ್ನೋ ಪ್ರೀತಿಸಿ ಆ ಬಿಸಿಯಲ್ಲಿ ಈ ಮಗುವಾಗಿ ನಂತರ ಅವಳ ಇನ್ನೊಂದು ಮದುವೆಗೆ ಈ ಮಗು ಅಡ್ಡಿಯಾಗುತ್ತೆ ಅಂತ ಬಿಟ್ಟು ಹೋದಳೇನೋ. ಅಂತೂ ಈ ಮಗುವನ್ನು ಅವಳು ಶಾಶ್ವತವಾಗಿ ಮರೆತುಬಿಟ್ಟಿರಬಹುದು. ಆದರೆ ಗುರಪ್ಪನವರಿಗೆ ಮಾತ್ರ ಮಾತೃವಾತ್ಸಲ್ಯದ ಮೇಲೆ ಬಹಳ ನಂಬಿಕೆ. ಒಂದಲ್ಲ ಒಂದು ದಿನ ಈ ಮಗು ಆ ತಾಯಿಯನ್ನು ಎಳೆದುಕೊಂಡು ಬಂದೇ ಬರುತ್ತೆ ಅನ್ನೋ ಭರವಸೆ. ಆ ಭರವಸೆಯ ಮೇಲೇ ಅವರು ದಿನಾ ರೈಲ್ವೇ ಸ್ಟೇಷನ್ನಿಗೆ ಹೋಗಿ ಬರುತ್ತಿದ್ದುದು.

ಮುರುಳಿ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಬಂದು ಮಾವನ ಕಡೆ ನೋಡಿ "ಏನ್ ಮಾವಾ ಇವತ್ತು ರೈಲ್ವೇ ಸ್ಟೇಷನ್ನಿಗೆ ಹೋಗೋ ಡ್ಯೂಟಿ ಇಲ್ವಾ'' ಅಂತ ಕೇಳಿದ. ತಕ್ಷಣ ನಿರ್ಮಲ ಒಳಗಿಂದ ಬಂದು "ಅಯ್ಯಯ್ಯೋ ಅದ್ಹೇಗೆ ಆಗುತ್ತೆ. ಹೋಗದೇ ಇದ್ದರೆ ಅಪ್ಪನಿಗೆ ನಿದ್ದೆ ಬರಬೇಕಲ್ವ" ಅಂದಳು. ಯಥಾಪ್ರಕಾರ ತಂದೆ ಮಗಳು ರೈಲ್ವೇ ಸ್ಟೇಷನ್ನಿಗೆ ಹೋದರು, ಕೂತರು. ಬಂದ ರೈಲನ್ನೂ ಹೋದ ರೈಲನ್ನೂ ನೋಡಿದರು. ಅಪ್ಪನ ಕುತೂಹಲದ ದೃಷ್ಟಿಯಲ್ಲಿ ಅರ್ಥ ಹುಡುಕಲು ಪ್ರಯತ್ನಿಸಿದಳು ನಿರ್ಮಲ. ವಾಪಸ್ ಬರುವಾಗ ಗುರಪ್ಪ ಮೌನವಾಗಿದ್ದರು. "ನೀನು ಅದ್ಯಾರಿಗೆ ಕಾಯ್ತಾ ಇದೀಯೋ ಅವರು ಅದ್ಯಾವತ್ತು ಬರ್ತಾರೋ ದೇವರೇ ಬಲ್ಲ'' ಅಂದುಕೊಂಡು ತಂದೆಯನ್ನು ಮಾತಿಗೆ ಎಳೆಯದೇ ಮನೆಗೆ ಬಂದಳು.

ಗುರಪ್ಪನವರಿಗೂ ವಯಸ್ಸಾಗ್ತಾ ಬಂತು. ಹೆಚ್ಚು ಓಡಾಡಬೇಡಿ ಅಂತ ಡಾಕ್ಟರು ಅಂದಿದ್ದರೂ ಗುರಪ್ಪ ಡಾಕ್ಟರೇ ಒಂದು ವಾಕಿಂಗು ಅಂತ ರೈಲ್ವೇ ಸ್ಟೇಷನ್ ತನಕ ಹೋಗಿ ಬರಲೇಬೇಕು ಅಂದಿದ್ದರು. ಒಂದೆರಡು ದಿನ ಮಗಳನ್ನು ಹತ್ತಿರ ಕರೆದು "ನಿನಗೆ ಏನೋ ಹೇಳಬೇಕು ಅಂತ ಕರೀತೀನಿ, ನೀನು ಬರೋ ಹೊತ್ತಿಗೆ ನನಗೆ ಮರತೇ ಹೋಗುತ್ತಲ್ಲ" ಅಂತ ಪೇಚಾಡೋರು. ಇದು ಪದೇ ಪದೇ ಆಗುತ್ತಾ ಬಂತು. ತಂದೆಯ ಮನದಲ್ಲಿ ಏನೋ ಇದೆ ಅನ್ನೋದು ನಿರ್ಮಲಳಿಗೆ ಗೊತ್ತಾಗಿ ಹೋಯ್ತು. ಮಾತ್ರೆ, ಔಷಧಿ ಇವುಗಳಲ್ಲಿದ್ದ ಗುರಪ್ಪನವರು ಒಂದು ದಿನ ರಾತ್ರಿ ಯಾರಿಗೂ ಹೇಳದ ಹಾಗೆ ಹೊರಟೇ ಹೋದರು. ಮುರುಳಿಯೇ ಮುಂದೆ ನಿಂತು ಎಲ್ಲ ಕೆಲಸ ಕಾರ್ಯಗಳನ್ನೂ ಮಾಡಿದ.

ಅಪ್ಪನ್ನ ನೆನಪು ಮಾಡಿಕೊಳ್ಳುತ್ತಾ ನಿರ್ಮಲ ನನಗೆ ಅವರನ್ನು ಮರೆಯೋದು ಸಾಧ್ಯವೇ ಇಲ್ಲ. ದಿನಾ ಅವರ ಜೊತೆ ವಾಕಿಂಗ್ ಹೋಗ್ತಾ ಇದ್ದೆ ಈಗ ಆ ನೆನಪು ನನ್ನನ್ನು ಕಾಡ್ತಾ ಇದೆ ಎಂದು ಅನಿಸುತ್ತಿತ್ತು. ಅವಳು ಒಂದು ದಿನ ಸಂಜೆ ತಾನೊಬ್ಬಳೇ ರೈಲ್ವೇ ಸ್ಟೇಷನ್ನಿಗೆ ಹೋದಳು. ರೈಲು ಬರೋವರೆಗೂ ಇದ್ದು ಬಂದಳು. ಆಗ ಅವಳಿಗೆ ತಂದೆ ತನ್ನ ಜೊತೆಯಲ್ಲಿಯೇ ಇದ್ದಾರೆ ಅನಿಸುತ್ತಿತ್ತು. ಮುರುಳಿ ಯಾಕೆ ಒಬ್ಬಳೇ ಹೋಗ್ತೀಯ ಅಂದರೆ ಇಲ್ಲ ಅಪ್ಪ ನನ್ನ ಜೊತೆ ಇರ್ತಾರೆ ಅಂದಳು. ಅಂದಿನಿಂದ ನಿರ್ಮಲ ಒಬ್ಬಳೇ ರೈಲ್ವೇ ಸ್ಟೇಷನ್ನಿಗೆ ಹೋಗಿ ಬರೋಕೆ ಶುರು ಮಾಡಿದಳು. ಈ ಒಂದು ಕಾರಣದಿಂದ ಅಪ್ಪನ ನೆನಪು ನನ್ನಲ್ಲಿ ಹಸಿರಾಗಿರಲಿ ಅಂತ.

ಒಂದು ದಿನ ಅವಳು ತುಸು ಮುಂಚೆಯೇ ಬಂದು ಒರಗು ಬೆಂಚಿನ ಮೇಲೆ ಕುಳಿತಳು. ಆ ಊರಲ್ಲಿ ಬಹಳ ದಿನಗಳಿಂದ ಇರೋ ಸ್ಟೇಷನ್ ಮಾಸ್ಟರು ಯಾರ ಬಳಿಯಲ್ಲಿಯೋ ನಿರ್ಮಲಳನ್ನು ತೋರಿಸಿ ಏನೋ ಹೇಳುತ್ತಿದ್ದರು. ಅದನ್ನು ನಿರ್ಮಲ ಗಮನಿಸಿದಳು. ಅವರು ನನ್ನ ಬಗ್ಗೆಯೇ ಹೇಳುತ್ತಿದ್ದಾರೆ ಅಂತ ಅವಳಿಗೆ ಅನಿಸಿತು. ಆದರೂ ಅವಳು ರೈಲ್ವೇ ಸ್ಟೇಷನ್ನಿಗೆ